ಅವಳು: ಈ ಫ್ಯಾಕ್ಟರಿಗಳ ಬಗ್ಗೆನೂ ಅವರು ಒಂದು ಮಹತ್ವದ ಮಾತನ್ನು ಹೇಳಿದ್ದರು ಅಲ್ವಾ?

ಅವನು: We don't want mass production, we want production by the masses ಅಂತ ಹೇಳಿದ್ರು. ಅಂದರೆ ಸಾಬೂನು, ಚಪ್ಪಲ್ಲು, ಬಟ್ಟೆ ಥಾನು ಇವೆಲ್ಲ ಫ್ಯಾಕ್ಟರಿಗಳಲ್ಲಿ ಸಾಲು ಸಾಲಾಗಿ ಯಂತ್ರಗಳ ಮೂಲಕ ತಯಾರಾಗ್ತಾವಲ್ಲ. ಹಾಗೆ ಮಾಡ್ತಾ ಹೋದರೆ ಜನರ ಕೈಗೆ ಕೆಲಸ ಇಲ್ಲದೇ ನಿರುದ್ಯೋಗ ಸೃಷ್ಟಿ ಆಗ್ತದೆ; ಅದರ ಬದಲು ಸಾವಿರಾರು ಕೈಗಳಿಗೆ ಕೆಲಸ ಕೊಡುವಂಥ ಯೋಜನೆ ಬರಬೇಕು ಅಂತ ಅವರು ಹೇಳಿದ್ದರು. ಅದಕ್ಕೇ ಅಲ್ಲವಾ ಅವರು ಚರಖಾದಿಂದ ನೂಲು ತೆಗೀತಾ ಇದ್ರು. ಚರಖಾವನ್ನೇ ಸ್ವಾತಂತ್ರ್ಯ ಸಂಗ್ರಾಮದ ಲಾಂಛನವನ್ನಾಗಿ ಮಾಡಿದ್ರು? ಗ್ರಾಮಗಳಲ್ಲಿ 'ಖಾದಿ ಮತ್ತು ಗ್ರಾಮೋದ್ಯೋಗ' ಮಂಡಲಿಯನ್ನು ಸ್ಥಾಪನೆ ಮಾಡೋದಕ್ಕೆ ಪ್ರೇರಣೆ ಕೊಡ್ತಾ ಇದ್ದರು. ಈಗಲೂ ಆಯಾ ತಾಲ್ಲೂಕಿಗೆ ಬೇಕಾದ ಸಾಬೂನು, ಶಾಂಪೂ, ಹವಾಯಿ ಚಪ್ಲಿ, ಬಾಸ್ಕೆಟ್ಟು, ಹೂಜಿ, ಪೈಪು, ಛತ್ರಿ, ಪಂಪ್‌ಸೆಟ್ಟು ಎಲ್ಲವನ್ನೂ ಆಯಾ ತಾಲ್ಲೂಕಿನಲ್ಲಿ ಉತ್ಪಾದನೆ ಮಾಡಬಹುದಿತ್ತು; ಆದರೆ ಎಲ್ಲಾನೂ ದೊಡ್ ದೊಡ್ ಕಂಪನಿಗಳ ದೊಡ್ಡ ಮಶಿನ್‌ಗಳ ಮುಷ್ಟಿಗೆ ಸೇರಿದಾವೆ. ಗ್ರಾಮೋದ್ಯೋಗ ಹೋಗಿ ನಿರುದ್ಯೋಗ ಎಲ್ಲಾ ಕಡೆ ತಾಂಡವ ಆಡ್ತಾ ಇದೆ. ಗಾಂಧೀಜಿಯ ಹೃದಯ ಹಳ್ಳಿಯ ಜನರಿಗಾಗಿ ಮಿಡಿತಾ ಇತ್ತು.

ಮಗು: ಏನದು, ಏನು ಏನು? ಮಿಡತೆ ಇತ್ತಾ? ಹೋದ್ ವರ್ಷ ಗುಜರಾತ್, ರಾಜಸ್ಥಾನದಲ್ಲಿ ಮಿಡತೆ ದಾಳಿ, ಅದೇನೋ ಕೋಟಿಗಟ್ಲೆ ಮಿಡತೆ ಬಂದುವಂತಲ್ಲ?

ಅವಳು: ಮಿಡತೆ ಅಲ್ಲವೋ ಮರಿ. ಮಿಡಿತ! ಗಾಂಧೀತಾತನ ಹೃದಯ ಮಿಡೀತಾ ಇತ್ತು ಅಂತ.

ಮಗು: ಆದರೆ ನಮ್ಮ ಕ್ಲಾಸ್ ಟೀಚರ್ ಹೇಳ್ತಾ ಇದ್ರು – ಗಾಂಧೀಜಿ ಅದೇನೊ ಮಿಡತೆ ದಾಳಿ ಬಗ್ಗೆ ಹೇಳಿದ್ರಂತೆ?

ಅವನು: (ಜೋರಾಗಿ ನಕ್ಕು) ಓ ಅದಾ! ಮಿಡತೆ ಅಂದ್ರೆ ಹಸುರು ಬಣ್ಣದ, ಬೆರಳುದ್ದದ ಒಂದು ಕೀಟ, ಉದ್ದುದ್ದ ಕಾಲುಗಳನ್ನು ಮಡಚಿ ಗಿಡದ ಎಲೆ, ಹಸುರು ಚಿಗುರನ್ನೆಲ್ಲ ತಿನ್ತಾ ಇರ್ತದೆ. ಸೂರ್ಯನ ಕುದುರೆ ಅಂತಾರೆ, ಪ್ರೇಯಿಂಗ್

